# ಆಹಾ ಸುದ್ದಿ!

★ ಸಸಿತೋಟ



ಚೀನಾದ ಈ ರೂಪದರ್ಶಿ ಅಜ್ಜ ಲಿಯು ಅಂತರ್‌ಜಾಲದಲ್ಲಿ ಭಾರಿ ಜನಪ್ರಿಯ. ಹಳ್ಳಿಯೊಂದರಲ್ಲಿ ಬಡ ರೈತನಾಗಿದ್ದ 72ರ ಹರೆಯದ ಈತನನ್ನು ಮೊಮ್ಮಗಳು ತನ್ನ ಮಹಿಳೆಯರ ಉಡುಪುಗಳ ಅನ್ ಲೈನ್ ಷಾಪಿಂಗ್ ಕಂಪೆನಿಯ ರೂಪದರ್ಶಿಯನ್ನಾಗಿ ಮಾಡಿದ್ದಾಳೆ. ಅಜ್ಜ ಸೆಡ್ಡು ಹೊಡೆದಿದ್ದು ಪುರುಷ ರೂಪದರ್ಶಿಯರಿಗೊ ಅಥವಾ ಮಹಿಳಾ ರೂಪದರ್ಶಿಯರಿಗೊ?

ಚಿಂಪಾಂಜಿಗಳೂ ಮನುಷ್ಯನಂತೆಯೇ ಮಧ್ಯವಯಸ್ಸಿನ ಬಿಕ್ಕಟ್ಟು ಅನುಭವಿಸುತ್ತಾರಂತೆ. ಹಾಗಂತ ನ್ಯೂಯಾರ್ಕ್‌ನ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ನಡೆಸಿದ ಸಂಶೋಧನೆ ಹೇಳಿದೆ. ಮಂಗನಿಂದ ಮಾನವ ಎಂಬುದು ಮತ್ತೊಮ್ಮೆ ಸಾಬೀತಾದಂತಾಗಿದೆ. ಆದರೂ ಮಕ್ಕಳ ಶಿಕ್ಷಣ, ಮದುವೆ, ಹೆಂಡತಿ ಜೊತೆಗಿನ ಜಗಳ ಎಂಬ ಚಿಂತೆಗಳಿಲ್ಲದ ಚಿಂಪಾಂಜಿಗಳಿಗೆ ಈ ಮಧ್ಯವಯಸ್ಸಿನ ಬಿಕ್ಕಟ್ಟು ಯಾಕೋ!

ಇಂಗ್ಲೆಂಡಿನಲ್ಲೊಂದು ಅಮೂಲ್ಯ ಸಂಶೋಧನೆ ನಡೆಯಿತು. ಪ್ರಿಯಕರ ಕೊಟ್ಟ ಒಳ ಉಡುಪುಗಳ ಉಡುಗೊರೆ ಕೊನೆಗೆ ಕೂರುವುದೆಲ್ಲಿ ಎಂದು? ಅದಕ್ಕೆ ಸಿಕ್ಕ ಉತ್ತರ ಅಟ್ಟದ ಮೇಲೆ. ಅಳತೆ ತಪ್ಪಿದರೆ ಆಪತ್ತು ಎಂಬ ಮಾತು ಈ ಕ್ರಿಸ್ಮಸ್ ಸಂದರ್ಭದಲ್ಲಿ 100 ದಶಲಕ್ಷ ಪೌಂಡ್ ಒಳ ಉಡುಪುಗಳಿಗೆ ಅನ್ವಯಿಸುತ್ತದಂತೆ. ಅಳತೆ ಹೆಚ್ಚುಕಮ್ಮಿಯಾದರೂ ಒಳ ಉಡುಪುಗಳ ಕಂಪೆನಿಗಳಿಗೇನೂ ನಷ್ಟ ಇಲ್ಲ ಬಿಡಿ.

ಹಂದಿ ಮಾಂಸವನ್ನು ಹೆಚ್ಚು ರುಚಿಕರವನ್ನಾಗಿ ಮಾಡುವುದು ಹೇಗೆ? ಇನ್ನಷ್ಟು ಗರಂ ಮಸಾಲೆ ಸೇರಿಸಬೇಕೆ? ಅದೆಲ್ಲಾ ಬೇಡ, ಹಂದಿಗಳನ್ನು ನೀರಿನಲ್ಲಿ ದುಮುಕಿಸಿ (ಡೈವ್) ಸಾಕು, ವ್ಯಾಯಾಮದಿಂದ ಮಾಂಸ ಹೆಚ್ಚು ರುಚಿಕರವಾಗುತ್ತದೆ ಎನ್ನುತ್ತಾನೆ ಚೀನಾದ ಹುವಾಂಗ್. ಆತ ತನ್ನಲ್ಲಿರುವ ಹಂದಿಗಳಿಗೆ ದಿನಕ್ಕೊಮ್ಮೆ ಈ ರೀತಿ ಡೈವ್ ಹೊಡೆಸಿ ವ್ಯಾಯಾಮ ಮಾಡಿಸುತ್ತಾನಂತೆ. ಜೊತೆಗೆ ಹಂದಿ ಮಾಂಸದ ದರವನ್ನು ಮೂರು ಪಟ್ಟು ಡೈವ್ ಹೊಡೆಸಿ ಲಾಭವನ್ನೂ ಮಾಡಿಕೊಳ್ಳುತ್ತಾನಂತೆ.



ದಕ್ಷಿಣ ಕೊರಿಯಾದ ಸಿಯೋಲ್ ಸಮೀಪವಿರುವ 'ಟಾಯ್ಲೆಟ್ ಕಲ್ಚರ್ ಪಾರ್ಕ್' ವಿಶ್ವದಲ್ಲಿಯೇ ಈ ರೀತಿಯ ಏಕೈಕ ಪಾರ್ಕ್. ಆ ದೇಶದಲ್ಲಿ ಕೂಡಾ ಕುಕ್ಕರುಗಾಲಿನಲ್ಲಿ ಕುಳಿತು ನಿಸರ್ಗದ ಕರೆಗೆ ಓಗೊಡುವುದೇ ಜನಪ್ರಿಯವಂತೆ. ಈ ಕ್ಷೇತ್ರದಲ್ಲಿ ಭಾರತದ ಹಳ್ಳಿಗಳ ಮಂದಿ ಮತ್ತು ಕೊರಿಯಾ ಜನ ಸಮಸಮ ಎಂದಂತಾಯಿತು.





ಫಿಲಿಪ್ಪೀನ್ಸ್‌ನಲ್ಲಿ ಈ ವರ್ಷಾಂತ್ಯದವರೆಗೂ ನಡೆಯುವ 'ಎತ್ತರ ಹಿಮ್ಮಡಿ ಶೂಗಳ ರೇಸ್'ನ ಸ್ಪರ್ಧಾಳು ಈತ. ಅಸಡಾಬಸಡಾ ಕಳಚಿಬಿದ್ದ ಶೂಗಳನ್ನು ನೋಡುವಾಗ ಎತ್ತರದ ಹಿಮ್ಮಡಿಯ ಶೂಗಳಿರುವುದೇ ಮಹಿಳೆಯರ ಸೌಂದರ್ಯಭರಿತ ನಡಿಗೆಗೆ ಎಂಬ ಲೇವಡಿ ನೆನಪಾಯಿತೇ? ಆದರೂ ಸ್ಪರ್ಧೆಯ ಅಯೋಜಕರು ಅದೇಕೆ ಫಲಕ ಹಾಕಿದರೋ 'ವಿಶೇಷ ಸೂಚನೆ: ಸ್ಪರ್ಧೆ ಪುರುಷರಿಗೆ ಮಾತ್ರ' ಎಂದು.